**<u>ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>**

ಸಿಸಿ ನಂ. 1413/2020

ಪ್ರಾಸಾ : 08

ಚಾಸಾ : 10

| | | |
|---|---|---|
| ಹೆಸರು | : | ಪವನ್ ರಾಜ್ |
| ತಂದೆಯ ಹೆಸರು | : | ಈಶ್ವರ ಪೂಜಾರಿ |
| ಪ್ರಾಯ | : | 25 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕನ್ಯಾನ ಗ್ರಾಮ |

---

ದಿಃ 13/01/2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

1. ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸೊತ್ತು ನಾಶಪಡಿಸಿದ ಎರಡು ಸ್ಥಳ ಮಹಜರ್ ಗಳನ್ನು ನಿಪಿ 12 ಮತ್ತು ನಿಪಿ 13 ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ 12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು. ಸುಮಾರು ಎರಡು ವರ್ಷಗಳ ಹಿಂದೆ ವಿಟ್ಲದ ಕಲಾಸಿ ಪಾಳ್ಯದಲ್ಲಿ ಪೋಲಿಸರ ಕೋರಿಕೆಯಂತೆ ಸದರಿ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸೊತ್ತುಗಳನ್ನು ನಾಶಪಡಿಸಿಲ್ಲ. ಸದರಿ ದಾಖಲೆಗೆ ನಾನು ಮಾತ್ರ ಸಹಿಯನ್ನು ಮಾಡಿರುತ್ತೇನೆ . ನಿಪಿ 12 ಮತ್ತು 13 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಮತ್ತು ಯಾವ ಉದ್ದೇಶಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಫೋಟೋದಲ್ಲಿ ಕಾಣುವ ಜಾನುವಾರುಗಳ ಚರ್ಮಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಇತರೆ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಎಪಿಪಿಯವರಿಂದಃ</u> -

2. ದಿಃ 22-05-2020 ರಂದು ಬಂಟ್ವಾಳ ತಾಲೂಕು ಸಾಲೆತ್ತೂರು ಗ್ರಾಮದ ಇತ್ತಕುಮೇರಿ ಎಂಬಲ್ಲಿ ಅಮಾನತುಪಡಿಸಿಕೊಂಡ 202 ಜಾನುವಾರುಗಳ ಚರ್ಮಗಳ ಪೈಕಿ 102 ಜಾನುವಾರುಗಳ ಚರ್ಮಗಳನ್ನು ಠಾಣೆಯ ಆವರಣಕ್ಕೆ ತರಲು ಅಸಾಧ್ಯವಾಗಿದ್ದರಿಂದ, ಸ್ಥಳದಲ್ಲಿಯೇ ಬಿಟ್ಟ

ಚರ್ಮಗಳನ್ನು ನಾಶಪಡಿಸಲು ನ್ಯಾಯಾಲಯದಿಂದ ಅನಮತಿಯನ್ನು ಪಡೆದು ಅವುಗಳನ್ನು ಸ್ಥಳದಲ್ಲಿಯೇ ನಾಶಪಡಿಸುವಾಗ ಪಂಚರಾಗುವಂತೆ ನನ್ನನ್ನು ಕೋರಿಕೊಂಡ ಮೇರೆಗೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. 102 ವಿವಿಧ ಬಣ್ಣದ ವಾಸನೆ ಬರುತ್ತಿದ್ದ ಜಾನುವಾರುಗಳ ಚರ್ಮಗಳನ್ನು ಗುಂಡಿಯೊಳಗೆ ತುಂಬಿಸಿ ಮಣ್ಣನ್ನು ಮುಚ್ಚಿ ದಫನ್ ಮಾಡಿದ ಸ್ಥಳವು 4 ನೇ ಆರೋಪಿಗೆ ಸೇರಿದ ಬಾಬ್ತು ಜಮೀನು ಆಗಿದ್ದು, ಸ್ಥಳದಲ್ಲಿಯೇ ಸಂಜೆ 4.30 ರಿಂದ 5.00 ಗಂಟೆಯವರೆಗೆ ನಿಪಿ 12 ರಂತೆ ಪೋಲಿಸರು ಮಹಜರ್ ಕ್ರಮ ಜರುಗಿಸಿ ನನ್ನ ಮತ್ತು ಚಾಸಾ 11 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ.

3. ದಿ. 22-05-2020 ರಂದು ವಿಟ್ಲ ಠಾಣಾ ಆವರಣಕ್ಕೆ ಅಮಾನತ್ತುಪಡಿಸಿಕೊಂಡ ಪೈಕಿ 100 ಜಾನುವಾರುಗಳ ಚರ್ಮಗಳು ಮತ್ತು ಒಂದು ಕೆ ಜಿ ತೂಕದ ತಲಾ ಎರಡು ಜಾನುವಾರುಗಳ ಮಾಂಸವನ್ನು ತುಂಬಿದ ಎರಡು ಪ್ಲಾಸ್ಟಿಕ್ ಚೀಲಗಳನ್ನು ಠಾಣೆಗೆ ತಂದು ಅವುಗಳ ನಾಶಶಪಡಿಸುವಿಕೆಗೆ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿದ್ದು, ಸೊತ್ತುಗಳ ನಾಶಪಡಿಸುವ ಕಾಲಕ್ಕೆ ಪಂಚರಾಗುವಂತೆ ನನ್ನನ್ನು ಕೋರಿಕೊಂಡ ಮೇರೆಗೆ ಒಪ್ಪಿರುತ್ತೇನೆ ಎಂದರೆ ಸರಿಯಲ್ಲ.

4. ವಿವಿಧ ಬಣ್ಣದ ವಾಸನೆ ಬರುತ್ತಿದ್ದ 100 ಜಾನುವಾರುಗಳ ಚರ್ಮಗಳು ಮತ್ತು ಎರಡು ಕಟ್ಟು ಮಾಂಸವನ್ನು ಜೆ ಸಿ ಬಿ ಯಂತ್ರದಿಂದ ಗುಂಡಿ ತೆಗೆಸಿ ತುಂಬಿ ಮಣ್ಣನ್ನು ಮುಚ್ಚಿ ಮಧ್ಯಾಹ್ನ 3.00 ಗಂಟೆಯಿಂದ 3.30 ರವರೆಗೆ ಪೋಲಿಸರು ಜರುಗಿಸಿದ ನಿಪಿ 13 ಕ್ರಮಕ್ಕೆ ನಾನು ಮತ್ತು ಚಾಸಾ 11 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ಫೋಟೋದಲ್ಲಿ ಕಾಣುವ ಚರ್ಮಗಳು ಮತ್ತು ಮಾಂಸವನ್ನು ನಮ್ಮ ಸಮಕ್ಷಮ ಪೋಲಿಸರು ನಾಶಪಡಿಸಿದರು ಎಂದರೆ ಸರಿಯಲ್ಲ. ನಿಪಿ 12 ಮತ್ತು ನಿಪಿ 13 ರ ಸಂಪೂರ್ಣ ವಿಚಾರ ನನ್ನ ತಿಳುವಳಿಕೆಗೆ ಇದ್ದು ಅದರ ಸಾಕ್ಷಿದಾರರಾಗಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ